**Code No. 16 Z**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ತೃತೀಯ ಪತ್ರಿಕೆ

# (ಸಂಕ್ಷೇಪಿಸುವಿಕೆ)

ಜನವರಿ, 2019

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 1 ಗಂಟೆ 30 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಶೀಘ್ರಲಿಪಿಯನ್ನು ಪರೋಕ್ಷ ವಿಧಾನದಲ್ಲಿ ಸುಮಾರು 1000 ಅಕ್ಷರಗಳಿಗೆ ಲಿಪಿ ಬರಹದಲ್ಲಿ ಸಂಕ್ಷೇಪಿಸಬೇಕೆಂದು ಅಭ್ಯರ್ಥಿಗಳಿಗೆ ಸೂಚನೆ ನೀಡತಕ್ಕದ್ದು

---

ದಿನಾಂಕ ಐದನೇ ಜುಲೈ ಎರಡು ಸಾವಿರದ
ಹದಿನೆಂಟರಂದು ಕರ್ನಾಟಕ ರಾಜ್ಯದ ಸನ್ಮಾನ್ಯ
ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.
ಕುಮಾರಸ್ವಾಮಿಯವರು ಎರಡು ಸಾವಿರದ
ಹದಿನೆಂಟು–ಹತ್ತೊಂಭತ್ತನೇ ಸಾಲಿನ
$\frac{1}{4}$ ಆಯವ್ಯಯ ಮುಂಗ/ಡ ಪತ್ರವನ್ನು ಈ ರೀತಿ
ಮಂಡಿಸಿದರು.

ಇದು ನಮ್ಮ ಮೈತ್ರಿ ಸರ್ಕಾರದ ಪ್ರಥಮ
ಮುಂಗಡ ಪತ್ರ. ಮೈತ್ರಿ ಸರ್ಕಾರದ ಒಲವು–
ನಿಲುವುಗಳು, ಕನಸು ನನಸುಗಳು, ಸಂಕಷ್ಟ
ಸವಾಲುಗಳು ಇದರಲ್ಲಿ ಪ್ರತಿಬಿಂಬಿತವಾಗಿವೆ.
$\frac{1}{2}$ ದಿನಾಂ/ಕ ಹನ್ನೆರಡನೇ ಮೇ ಮಾಹೆ ಎರಡು
ಸಾವಿರದ ಹದಿನೆಂಟರಂದು ನಡೆದ ಹದಿನೈದನೇ
ವಿಧಾನಸಭಾ ಚುನಾವಣೆಯು ಕರ್ನಾಟಕದ
ದಿಕ್ಸೂಚಿಯನ್ನೇ ಬದಲಿಸಿದೆ. ಚುನಾವಣೆಗೆ
$\frac{3}{4}$ ಮುನ್ನ ಪರಸ್ಪರ ಸೆಣಸಾಡಿದ ಎರಡು/
ರಾಜಕೀಯ ಪಕ್ಷಗಳು, ಫಲಿತಾಂಶದ ನಂತರ
ಮೈತ್ರಿ ಸಾಧಿಸಿ ಸರ್ಕಾರ ರಚಿಸಿರುವುದು
ಪ್ರಜಾಪ್ರಭುತ್ವದ ಒಂದು ಸೊಬಗು.
ಬದಲಾಗುXತ್ತಿರುವ ರಾಜಕೀಯ ಪರಿಸ್ಥಿತಿಯಲ್ಲಿ 1
ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಗಳಲ್ಲಿ ಮೈತ್ರಿ
ಸರ್ಕಾರಗಳು ಅನಿವಾರ್ಯವಾಗುತ್ತಿವೆ. ಈ
ಹಿನ್ನೆಲೆಯಲ್ಲಿ ನಾವು ರಾಜ್ಯ ಮೈತ್ರಿ ಸರ್ಕಾರದ
ಅನಿವಾರ್ಯತೆ ಮತ್ತು ಅಗತ್ಯದ
ವಾಸ್ತವತೆಯನ್ನು ಒಪ್ಪಿ/ಕೊಂಡಿದ್ದೇವೆ. $\frac{1}{4}$
ಸಮನ್ವಯ ಸಮಿತಿಯ ಆಶಯದಂತೆ ಎರಡೂ
ಪಕ್ಷಗಳ ಪ್ರಣಾಳಿಕೆಗಳ ಪ್ರಮುಖ ಅಂಶಗಳನ್ನು
ಆಧರಿಸಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು
ರೂಪಿಸಿ ಅನುಷ್ಠಾನಗೊಳಿಸಲಿದ್ದೇವೆ. ಮೈತ್ರಿ
ಸರ್ಕಾರದ/ ಸುಲಲಿತ ಚಾಲನೆಗಾಗಿ ನಾವು $\frac{1}{2}$
ರೂಪಿಸಿಕೊಂಡಿರುವ ಮೈತ್ರಿ ಧರ್ಮಕ್ಕೆ
ಅನುಗುಣವಾಗಿ ಮುನ್ನಡೆದು ಕರ್ನಾಟಕದ

ಸರ್ವಾಗೀಣ ಅಭಿವೃದ್ಧಿಯನ್ನು ಸಾಧಿಸುತ್ತೇವೆ
ಎಂದು ತಿಳಿಸಿದರು.

ಹೊಸ ಸರ್ಕಾರ ರಚನೆಯಾದಾಗ ಜನರು
$\frac{3}{4}$ ಸ/ಹಜವಾಗಿ ಸರ್ಕಾರದಿಂದ ಸಾಕಷ್ಟು
ನಿರೀಕ್ಷೆಗಳನ್ನು ಇಟ್ಟುಕೊಂಡಿರುತ್ತಾರೆ. ನಾವು
ಜನರ ನಿರೀಕ್ಷೆಗಳನ್ನು ಹುಸಿಗೊಳಿಸದೆ ಅವರ
ಆಶಯಗಳನ್ನು ಈಡೇರಿಸಲು ಪ್ರಾಮಾಣಿಕವಾಗಿ
ಪ್ರಯತ್ನಿಸುತ್ತೇವೆ. ಈಗ ನಮ್ಮ ಮೈತ್ರಿ
2 ಸರ್ಕಾXರದ ಮುಂದೆ ರೈತರ ಸಾಲ ಮನ್ನಾ
ಭರವಸೆಯಂತಹ ಬೃಹತ್ ಸವಾಲಿದೆ. ಇದನ್ನು
ಈಡೇರಿಸಲು ಅಗತ್ಯವಿರುವ ಸಂಪನ್ಮೂಲ
ಸಂಗ್ರಹಣೆ ನಮ್ಮ ಸರ್ಕಾರದ ಪ್ರಥಮ
ಆದ್ಯತೆಯಾಗಿದೆ. ಇದಕ್ಕಾಗಿ ನಾವು ಲಭ್ಯವಿರುವ
$\frac{1}{4}$ ಸಂಪ/ನ್ಮೂಲಗಳನ್ನು ಒಗ್ಗೂಡಿಸಲು ಈಗಾಗಲೇ
ಕಾರ್ಯಪ್ರವೃತ್ತರಾಗಿದ್ದೇವೆ. ಈ ನಿಟ್ಟಿನಲ್ಲಿ
ಸರ್ಕಾರದ ಅನಗತ್ಯ ದುಂದು ವೆಚ್ಚಗಳಿಗೆ
ಕಡಿವಾಣ ಹಾಕಲು ನಾನು ಮುಖ್ಯಮಂತ್ರಿಗಳ
ಸಚಿವಾಲಯದಿಂದಲೇ ಮಿತವ್ಯಯದ
$\frac{1}{2}$ ನಡೆಗಳ/ನ್ನು ಆರಂಭಿಸಿದ್ದೇನೆ. ನನ್ನ
ಸಹೋದ್ಯೋಗಿ ಸಚಿವರುಗಳು ಸಹ
ಮಿತವ್ಯಯದ ವಿಷಯದಲ್ಲಿ ನನ್ನ ನಡೆಗಳನ್ನು
ಅನುಸರಿಸಿರುತ್ತಾರೆ. ಎನ್ನುವ ವಿಶ್ವಾಸ
ನನಗಿದೆಯೆಂದರು.

ಕರ್ನಾಟಕವು ಹಲವಾರು ಕ್ಷೇತ್ರಗಳಲ್ಲಿ
$\frac{3}{4}$ ರಾಷ್ಟ್ರ/ದಲ್ಲಿಯೇ ಮುಂಚೂಣಿ ರಾಜ್ಯವಾಗಿದೆ.
ಆದರೆ, ನಾವು ಇಷ್ಟಕ್ಕೆ ಸಂತೃಪ್ತರಾಗದೆ ಇನ್ನು
ಹಲವಾರು ವಲಯಗಳಲ್ಲಿ ಮುಂಚೂಣಿ
ರಾಜ್ಯವಾಗಲು ಪ್ರಯತ್ನಿಸಬೇಕಾಗಿದೆ.
ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲಾ
3 ವಲಯಗಳಲ್ಲೂX ಸಮಾನ ಬೆಳವಣಿಗೆ ಹಾಗೂ
ಸಮಗ್ರ ಪ್ರಗತಿಯಾಗಬೇಕು. ಈ ದಿಕ್ಕಿನಲ್ಲಿ ನಾವು
ಕೃಷಿ ಮತ್ತು ಕೈಗಾರಿಕಾ ವಲಯದ ಬೆಳವಣಿಗೆಗೆ
ಮತ್ತಷ್ಟು ಚೈತನ್ಯವನ್ನು ತುಂಬುತ್ತೇವೆ. ಇತ್ತೀಚಿನ
ವರ್ಷಗಳಲ್ಲಿ ರಾಜ್ಯ ಅಭಿವೃದ್ಧಿಗೆ ಹೆಚ್ಚಿನ/ $\frac{1}{4}$
ಕೊಡುಗೆ ನೀಡುತ್ತಿರುವ ಸೇವಾ ವಲಯಕ್ಕೆ
ಕೂಡ ವಿಶೇಷ ಉತ್ತೇಜನ ನೀಡುತ್ತವೆ.
ಕರ್ನಾಟಕ ಬಹಳ ಹಿಂದಿನಿಂದಲೂ ಆರ್ಥಿಕ
ಶಿಸ್ತನ್ನು ಕಾಪಾಡಿಕೊಂಡು ಬಂದಿರುವ ರಾಜ್ಯ.
ಈ ಹಿನ್ನೆಲೆಯಲ್ಲಿ ರೈತರ ಸಾಲ ಮನ್ನಾದಂತಹ
ಕಠಿಣ/ ಸವಾಲನ್ನು ಎದುರಿಸುವ $\frac{1}{2}$
ಸಂದರ್ಭದಲ್ಲಿಯೂ ಸಹ ನಮ್ಮ ಮೈತ್ರಿ
ಸರ್ಕಾರ ಆರ್ಥಿಕ ಶಿಸ್ತಿಗೆ ಬದ್ಧವಾಗಿ
ನಡೆಯುತ್ತದೆ ಎನ್ನುವ ಭವರಸೆಯನ್ನು ನಾನು
ಈ ಗೌರವಾನ್ವಿತ ಸದನಕ್ಕೆ ನೀಡಬಯಸುತ್ತೇನೆ.
ಯಾವುದೇ ಸರ್ಕಾರ ತಾಯಿ/ ಗೃಹ $\frac{3}{4}$
ಹೊಂದಿರಬೇಕು ಎನ್ನುವುದು ನನ್ನ ನಂಬಿಕೆ.
ಹೀಗಾಗಿ ಮೈತ್ರಿ ಸರ್ಕಾರದ ಎಲ್ಲಾ
ಕಾರ್ಯಕ್ರಮಗಳನ್ನು ಮಾತೃ ಮಮತೆಯಿಂದ
ರೂಪಿಸಿ ಅನುಷ್ಠಾನಗೊಳಿಸುವ ಆಶಯ
ನಮ್ಮದು. ಈ ಹಿಂದಿನ ಸರ್ಕಾರದ ಜನಪರ
ಯೋಜನೆಗಳುX ಮತ್ತು ಕಾರ್ಯಕ್ರಮಗಳಿಗೆ 4
ಮತ್ತಷ್ಟು ಚೈತನ್ಯ ತುಂಬಿ ಮುಂದುವರಿಸುವುದು
ಮೈತ್ರಿ ಸರ್ಕಾರದ ಪ್ರಮುಖ ಧ್ಯೇಯವಾಗಿದೆ.
ಗ್ರಾಮೀಣ ಕರ್ನಾಟಕದಲ್ಲಿ ಹೊಸ
ಕನಸುಗಳನ್ನು ಬಿತ್ತಿ ಬೆಳೆಯುವುದು ನಮ್ಮ
ಬಯಕೆ. ಯುವ ಸಮುದಾಯದಲ್ಲಿ/ ಚೈತನ್ಯ $\frac{1}{4}$
ಚಿಮ್ಮಿಸುವುದು ನಮ್ಮ ಆಸೆ. ಮಹಿಳೆಯರ
ಅಂಗಳದಲ್ಲಿ ತಂಗಾಳಿ ತರುವುದು ನಮ್ಮ
ಆಕಾಂಕ್ಷೆ. ರೈತಾಪಿ ಜನರು ಬದುಕಿನಲ್ಲಿ ನೆಮ್ಮದಿ
ಮೂಡಿಸುವುದು ನಮ್ಮ ಸಂಕಲ್ಪವೆಂದರು.

ರಾಜ್ಯವು ನಾಲ್ಕನೇ ಹಣಕಾಸು
ಆಯೋಗವ/ನ್ನು ಎರಡು ಸಾವಿರದ $\frac{1}{2}$

ಹದಿನೈದರಲ್ಲಿ ರಚಿಸಿತ್ತು. ಈ ಆಯೋಗವು
ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ
ಪಂಚಾಯತ್ ರಾಜ್ಯ ಮತ್ತು ನಗರ ಸ್ಥಳೀಯ
ಸಂಸ್ಥೆಗಳ ಜನ ಪ್ರತಿನಿಧಿಗಳು, ಅಧಿಕಾರಿಗಳು
$\frac{3}{4}$ ಹಾಗೂ ಜನ ಸಾಮಾ/ನ್ಯರ ಅಭಿಪ್ರಾಯಗಳನ್ನು
ಪಡೆದು ಅದನ್ನು ಪರಿಶೀಲಿಸಿ ತನ್ನ ಅಂತಿಮ
ವರದಿಯನ್ನು ನೀಡಿರುತ್ತದೆ. ಆಯೋಗವು ತನ್ನ
ಶಿಫಾರಸ್ಸನ್ನು ಎರಡು ಸಾವಿರದ ಹದಿನೆಂಟು–
ಹತ್ತೊಂಭತ್ತರಿಂದ ಎರಡು ಸಾವಿರದ
5 ಇಪ್ಪತ್ತೆರಡುX ಇಪ್ಪತ್ಮೂರರವರೆಗೆ ಐದು
ವರ್ಷಗಳ ಅವಧಿಗೆ ಸಲ್ಲಿಸಿದೆ ನಾಲ್ಕನೇ ರಾಜ್ಯ
ಹಣಕಾಸು ಆಯೋಗವು ಮುಖ್ಯವಾಗಿ ಈ
ಕೆಳಕಂಡ ಅಂಶಗಳನ್ನು ತನ್ನ ವರದಿಯಲ್ಲಿ
ಶಿಫಾರಸ್ಸು ಮಾಡಿದೆ. ರಾಜ್ಯದ ಸ್ವಂತ ತೆರಿಗೆಯಲ್ಲಿ
$\frac{1}{4}$ ಸ್ಥಳೀ/ಯ ಸಂಸ್ಥೆಗಳ ಪಾಲನ್ನು, ರಾಜ್ಯ ಸಾಲ
ರಹಿತ ಸ್ವಂತ ರಾಜಸ್ವ ಸ್ವೀಕೃತಿಗಳ ಆಧಾರದ
ಮೇಲೆ ನಿರ್ಧರಿಸಲಾಗುತ್ತದೆ. ಅದರಂತೆ,
ಆಯೋಗವು ರಾಜ್ಯದ ಸ್ವಂತ ತೆರಿಗೆಯಲ್ಲಿ
ಸ್ಥಳೀಯ ಸಂಸ್ಥೆಗಳ ಪಾಲನ್ನು ಶೇಕಡಾ
$\frac{1}{2}$ ನಲವತ್ತೆರ/ಡರಿಂದ ಶೇಕಡಾ ನಲವತ್ತೆಂಟಕ್ಕೆ
ಹೆಚ್ಚಿಸಲು ಶಿಫಾರಸ್ಸು ಮಾಡಿದೆ. ಅಂದರೆ,
ಐದು ವರ್ಷಗಳ ಅವಧಿಗೆ ಪಂಚಾಯತ್
ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ
ಒಟ್ಟು ರಾಜಸ್ವ ಪಾಲು ಶೇಕಡಾ
$\frac{3}{4}$ ನಲವತ್ತೆಂಟರಷ್ಟಾಗಿರುತ್ತದೆ./ ಈ ಶಿಫಾರಸ್ಸನ್ನು
ಎರಡು ಸಾವಿರದ ಹದಿನೆಂಟು–
ಹತ್ತೊಂಭತ್ತರಿಂದ ಎರಡು ಸಾವಿರದ
ಇಪ್ಪತ್ತೆರಡು–ಇಪ್ಪತ್ಮೂರರವರೆಗೆ ಐದು
ವರ್ಷಗಳ ಅವಧಿಗೆ ಹಂತ ಹಂತವಾಗಿ
ಅನುಷ್ಠಾನಗೊಳಿಸಲು ನಮ್ಮ ಸರ್ಕಾರವು
6 ನಿರ್ಧXರಿಸಿದೆ.

ರೈತರ ಕೃಷಿ ಸಾಲಮನ್ನಾ ಮತ್ತು ಸರ್ಕಾರಿ
ನೌಕರರ ವೇತನ ಪರಿಷ್ಕರಣೆಯಿಂದಾಗಿ
ಉಂಟಾಗಿರುವ ಆರ್ಥಿಕ ಹೊರೆಯ
ನಡುವೆಯೂ ಕೂಡ ನಮ್ಮ ಸರ್ಕಾರವು ರಾಜ್ಯ
ಅಭಿವೃದ್ಧಿ ಯೋಜನೆಗಳಿಗೆ ಸಂಪನ್ಮೂಲ ಕೊರತೆ
ಉಂ/ಟಾಗದಂತೆ ಆರ್ಥಿಕ ನಿರ್ವಹಣೆ $\frac{1}{4}$
ಮಾಡಲು ಹಾಗೂ ಕರ್ನಾಟಕ ವಿತ್ತೀಯ
ಹೊಣೆಗಾರಿಕೆ ಅಧಿನಿಯಮ ಎರಡು ಸಾವಿರದ
ಎರಡರಲ್ಲಿ ಸೂಚಿಸಿರುವ ವಿತ್ತೀಯ
ಸೂಚ್ಯಂಕಗಳ ಮಿತಿಯೊಳಗೆ ಆಯ–
ವ್ಯಯಗಳನ್ನು ಮಂಡಿಸಲು ಪ್ರ/ಯತ್ನ ಮಾಡಿದೆ. $\frac{1}{2}$

ತಮ್ಮ ಮೈತ್ರಿ ಸರ್ಕಾರದ ನಿಕಟಪೂರ್ವ
ಸರ್ಕಾರವು ರಾಜ್ಯದ ಪ್ರಗತಿಗಾಗಿ ಹಲವಾರು
ಜನಪರ ಕಾರ್ಯಕ್ರಮಗಳನ್ನು ರೂಪಿಸಿ
ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಇದನ್ನು
ನಾನು ಇಲ್ಲಿ ಸ್ಮರಿಸಿಕೊಳ್ಳುತ್ತಾ ಈ/ ಹಿಂದೆ $\frac{3}{4}$
ಹದಿನಾರನೇ ಫೆಬ್ರವರಿ ಎರಡು ಸಾವಿರದ
ಹದಿನೆಂಟು–ಹತ್ತೊಂಭತ್ತರಲ್ಲಿ ಸದನದಲ್ಲಿ
ಮಂಡಿಸಿದ್ದ ಆಯವ್ಯಯದಲ್ಲಿ ಘೋಷಿಸಿರುವ
ಎಲ್ಲಾ ಕಾರ್ಯಕ್ರಮಗಳನ್ನು
ಮುಂದುವರೆಸುತ್ತೇನೆ.

ಕರ್ನಾಟಕವನ್ನು ಹಸಿವು
ಮುಕ್ತಗೊಳಿXಸುವ ಆಶಯದ ‘ಅನ್ನಭಾಗ್ಯ’ 7
ಯೋಜನೆಯು ಬಡತನ ರೇಖೆಗಿಂತ ಕೆಳಗಿರುವ
ನಾಲ್ಕು ಕೋಟಿ ಜನರಿಗೆ ಆಹಾರಧಾನ್ಯವನ್ನು
ಉಚಿತವಾಗಿ ವಿತರಿಸಿ ಬಡವರ ಹಸಿವನ್ನು
ನೀಗಿಸಿದೆ. ಬಡಜನರು ಅನ್ನಕ್ಕಾಗಿ ಯಾರ
ಮುಂ/ದೆಯೂ ಕೈಚಾಚದೆ ಸ್ವಾಭಿಮಾನದಿಂದ $\frac{1}{4}$
ಬದುಕಬೇಕು ಎನ್ನುವ ಉದಾತ್ತ ಧ್ಯೇಯದ
ಯೋಜನೆಯನ್ನು ಜಾರಿಗೊಳಿಸಿದ ಏಕೈಕ ರಾಜ್ಯ

ಕರ್ನಾಟಕ ಎನ್ನುವುದು ನಮ್ಮ ಹೆಗ್ಗಳಿಕೆ. ಶಾಲಾ
ಮಕ್ಕಳ ಅಪೌಷ್ಠಿಕತೆಯನ್ನು ನಿವಾರಿಸುವ
$\frac{1}{2}$ ಉದ್ದೇ/ಶದ ಕ್ಷೀರಭಾಗ್ಯ ಯೋಜನೆಯು
ಅಂಗನವಾಡಿ ಮತ್ತು ಶಾಲಾ ಮಕ್ಕಳಿಗೆ ವಾರದಲ್ಲಿ
ಐದು ದಿನ ಉಚಿತವಾಗಿ ಬಿಸಿ ಹಾಲು ವಿತರಿಸಿ
ರಾಷ್ಟ್ರದ ಗಮನ ಸೆಳೆದಿದೆ. ಇದರಿಂದ ಶಾಲಾ
ಮಕ್ಕಳಲ್ಲಿ ಪೌಷ್ಠಿಕತೆ ವೃದ್ಧಿಯಾಗುತ್ತಿದ್ದು,
$\frac{3}{4}$ ಅ/ವರು ಆಟ ಪಾಠಗಳಲ್ಲಿ ಹೆಚ್ಚು
ಕ್ರಿಯಾಶೀಲರಾಗಿದ್ದಾರೆ.

ಪಾರಂಪರಿಕ ಇಂಧನ ಮೂಲಗಳ
ಜೊತೆಗೆ ನವೀಕರಿಸಬಹುದಾದ ಇಂಧನಗಳ
ಮೂಲಕ ಕೂಡ ರಾಜ್ಯದಲ್ಲಿ ಹೆಚ್ಚಿನ ವಿದ್ಯುತ್
8 ಉತ್ಪಾದನೆಗೆ ಕರ್ನಾಟಕವು ಉತ್ತೇXಜನ
ನೀಡುತ್ತಿದೆ. ಇದಕ್ಕಾಗಿ 'ಸೌರಶಕ್ತಿ ನೀತಿ'ಯನ್ನು
ರೂಪಿಸಲಾಗಿದ್ದು, ಎರಡು ಸಾವಿರದ
ಮುನ್ನೂರು ಮೇಗಾವ್ಯಾಟ್ ಸೌರವಿದ್ಯುತ್
ಉತ್ಪಾದನೆಯಾಗುತ್ತಿದೆ. ಏಷ್ಯಾ ಖಂಡದಲ್ಲಿಯೇ
ಅತಿ ದೊಡ್ಡದಾದ ಸೌರಶಕ್ತಿ ಉತ್ಪಾದನಾ
$\frac{1}{4}$ ಘಟಕ/ ತುಮಕೂರು ಜಿಲ್ಲೆಯ
ಪಾವಗಡದಲ್ಲಿದ್ದು, ಇಲ್ಲಿ ಸುಮಾರು ಆರು
ನೂರು ಮೇಗಾವ್ಯಾಟ್ ವಿದ್ಯುತ್
ಉತ್ಪಾದನೆಯಾಗುತ್ತಿದೆ. ಮುಂದಿನ ದಿನಗಳಲ್ಲಿ
ಇದರ ಸಾಮರ್ಥ್ಯವನ್ನು ಹೆಚ್ಚು ಮಾಡಲು
ಪ್ರಯತ್ನಿಸಲಾಗುವುದು.

$\frac{1}{2}$ ಆಡಳಿತ ಸುಧಾರಣೆ/ಯಲ್ಲಿ ಕರ್ನಾಟಕ
ರಾಜ್ಯವು ರಾಷ್ಟ್ರಕ್ಕೆ ಮಾದರಿಯಾಗಿದೆ.
ಆಧುನಿಕ ತಂತ್ರಜ್ಞಾನವನ್ನು ಆಡಳಿತ ವ್ಯವಸ್ಥೆಗೆ
ಅಳವಡಿಸಿಕೊಳ್ಳುವಲ್ಲಿ ಕರ್ನಾಟಕವೇ
ಮುಂಚೂಣಿ ರಾಜ್ಯವಾಗಿದ್ದು, ಕೆ–ಸ್ವಾನ್–
ಎರಡು ಜಾಲದ ಮೂಲಕ ರಾಜ್ಯ ಹತ್ತು
ಸಾ/ವಿರದ ಸರ್ಕಾರ ಕಚೇರಿಗಳನ್ನು $\frac{3}{4}$
ಇ–ಆಡಳಿತ ವ್ಯಾಪ್ತಿಗೆ ತಂದಿದೆ. ಖಜಾನೆ–
ಎರಡರ ಮೂಲಕ ಸರ್ಕಾರಿ ಹಣ ಪಾವತಿ
ವ್ಯವಸ್ಥೆಯನ್ನು ಸರಳೀಕರಿಸಿ, ಪಾರದರ್ಶಕ
ಮಾಡಿ ಹಣಕಾಸು ನಿರ್ವಹಣೆಯ ದಕ್ಷತೆಯನ್ನು
ಹೆಚ್ಚಿಸಲಾXಗಿದೆ. 9

ಬೆಂಗಳೂರಿನ 'ನಮ್ಮ ಮೆಟ್ರೋ' ರೈಲು
ಯೋಜನೆ ರಾಷ್ಟ್ರದಲ್ಲಿಯೇ ಅತ್ಯುತ್ತಮವಾಗಿದ್ದು,
ಮೊದಲ ಹಂತದಲ್ಲಿ ನಲವತ್ತೆರಡು
ಕಿಲೋ ಮೀಟರ್ ಲೋಕಾರ್ಪಣೆಗೊಂಡಿದೆ.
ಬೆಂಗಳೂರು ನಗರದ ಸಂಚಾರ ವ್ಯವಸ್ಥೆಯಲ್ಲಿ
ಕ್ರಾಂತಿಕಾರಕ/ ಬದಲಾವಣೆ ಮಾಡಿರುವ 'ನಮ್ಮ $\frac{1}{4}$
ಮೆಟ್ರೋ'ದಲ್ಲಿ ಲಕ್ಷಾಂತರ ಪ್ರಯಾಣಿಕರು
ಪ್ರತಿದಿನ ಸಂತಸದಿಂದ ಸಂಚರಿಸುತ್ತಿದ್ದಾರೆ.
ಮೆಟ್ರೋ ರೈಲಿನಿಂದಾಗಿ ಬೆಂಗಳೂರು ನಗರದ
ವಾಹನ ದಟ್ಟಣೆ ಸಾಕಷ್ಟು ಸುಧಾರಿಸಿದೆ.

ನಗರ ಪ್ರದೇಶ/ದ ಬಡಜನರಿಗೆ $\frac{1}{2}$
ಕೈಗೆಟುಕುವ ದರದಲ್ಲಿ ಆಹಾರ ಒದಗಿಸಲು
ಬೆಂಗಳೂರಿನಲ್ಲಿ ಪ್ರತಿ ವಾರ್ಡಿಗೊಂದರಂತೆ
'ಇಂದಿರಾ ಕ್ಯಾಂಟೀನ್'ಗಳನ್ನು ತೆರೆಯಲು
ಉದ್ದೇಶಿಸಿ ಇಂದಿರಾ ಕ್ಯಾಂಟೀನ್
ಆರಂಭಿಸಲಾಗಿದ್ದು, ಸ್ಥಳ ಲಭ್ಯವಿರದ/ $\frac{3}{4}$
ವಾರ್ಡ್‌ಗಳಲ್ಲಿ ಮೊಬೈಲ್ ಕ್ಯಾಂಟೀನ್
ಮೂಲಕ ಆಹಾರ ಒದಗಿಸಲಾಗುತ್ತಿದೆ.
ಬೆಂಗಳೂರು ನಗರದಲ್ಲಿ ಇಂದಿರಾ ಕ್ಯಾಂಟೀನ್‌ನ
ಜನಪ್ರಿಯತೆಯನ್ನು ಗಮನಿಸಿ, ರಾಜ್ಯದಾದಂತ
ಇಂದಿರಾ ಕ್ಯಾಂಟೀನ್‌ಗಳನ್ನು ತೆರೆಯಲು
ಕ್ರಮವಿಡಲಾಗಿದೆ.X 10